# ಊರುಮನೆ



ಎಚ್.ಆರ್. ಸುಜಾತಾ

ಕಲೆ: ಗುಜ್ಜಾರ್

ಬೆಂಗಳೂರಿನ ರಾಜಧಾನಿಯ ಒಂದು ಪ್ರತಿಷ್ಠಿತ ಬಡಾವಣೆ, ದೊಡ್ಡ ಅಳತೆಯ ನಿವೇಶನದಲ್ಲಿ ಅಂದಚಂದದ ಮನೆಗಳು. ದೊಡ್ಡ ರಸ್ತೆಗಳು, ಇಕ್ಕೆಲದಲ್ಲಿ ಹಸಿರು ಮರಗಳ ಸಾಲು, ಜನಗಳೇ ಇಲ್ಲದ ರಸ್ತೆಗಳಲ್ಲಿ ಅಲ್ಲೊಂದು ಇಲ್ಲೊಂದು ದೊಡ್ಡ ಕಾರುಗಳ ಓಡಾಟ ಮಾತ್ರ ಕಾಣುತ್ತಿದ್ದು ಆ ಬಡಾವಣೆಗೆ ರಾಜಗಾಂಭೀರ್ಯ ತಂದಿದ್ದವು. ಕೂಲಿಂಗ್ ಗ್ಲಾಸ್ ಏರಿಸಿ ಗೇಟೊಳಗಿಂದಲೇ ಕಾರನ್ನೇರಿ ಹೋಗುವ ಆ ಬಡಾವಣೆಯ ಜನರ ಅಕ್ಕಪಕ್ಕದ ವಿಚಾರಗಳು ಅವರಿಗೆ ತಿಳಿಯುತ್ತಿದ್ದುದು ದೊಡ್ಡ ಚರಂಡಿಯ ಆಚೆಗಿರುವ ದೇವಿನಗರದಿಂದ ಬಂದು ಇವರ ಮನೆಗಳ ಗೇಟು ತೆಗೆಯುವ ವಾಚ್‌ಮ್ಯಾನ್‌ಗಳು ಹಾಗೂ ಕೆಲಸದವರ ಮೂಲಕವೇ.

ಇಂತಿಪ್ಪ ರಾಜಬಡಾವಣೆಗೆ ಹೊಂದಿಕೊಂಡಂಥ ಒಂದು ಹಳ್ಳಿ ಗೊಲ್ಲಹಳ್ಳಿ. ಈಗ ಅದು ದೇವಿನಗರ, ಮುಕ್ಕಿರಿವಷ್ಟು ಜನ. ನೈಟಿ ಹಾಕಿಕೊಂಡು ಓಡಾಡುವ ಹೆಂಗಸರು, ಖಾಕಿ ಅಂಗಿ-ಚೆಡ್ಡಿ ಹಾಕಿಕೊಂಡು ಅರಳಿಕಟ್ಟೆ ಮೇಲೆ ಒರಗಿರುವ ವಯಸ್ಸಾದ ಗಂಡಸರು. ಊರಲ್ಲಿ ಉಳಿದ ಅಲ್ಲೊಬ್ಬ ಇಲ್ಲೊಬ್ಬ ಮುದುಕಿಯರು ಕವುಳಿಗೆ ಎಲೆಗಂಟನ್ನು ಒತ್ತರಿಸಿ ಮನೆಮುಂದೆ ಬಾಗಿಲಲ್ಲಿ ಕುಳಿತಿರುತಿದ್ದರು... ಕಳೆದುಹೋದ ತಮ್ಮ ಕಾಲವನ್ನು ನೆನೆಯುತ್ತ, ಜೀನ್ಸ್ ಪ್ಯಾಂಟ್ ತೊಟ್ಟು ಓಡಾಡುವ ತಮ್ಮ ಮೊಮ್ಮಕ್ಕಳ ಮುಂದುವರಿದ ಶೋಕಿಗೆ ಬೆರಗಾಗುತ್ತಾ... ಆ ರಾಜ ಬಡಾವಣೆಯ ಶೋಕಿಗಳೆಲ್ಲ ಈ ದೇವಿನಗರಕ್ಕೆ ದೊಡ್ಡ ಚರಂಡಿ ಸೇತುವೆ ಮೂಲಕ ಹರಿದು ಬಂದು ಕಣ್ಣಲ್ಲಿ ಬೆರಗು ಹುಟ್ಟಿಸುತ್ತಿದ್ದವು. ಅಂತೆಯೇ ಇತ್ತೀಚಿನ ಗೊಲ್ಲಹಳ್ಳಿಯ ಹುಡುಗರು ದೊಡ್ಡ ಬಡಾವಣೆಯ ಜನರ ಅನುಕರಣೆಯಿಂದಾಗಿ ಹಳ್ಳಿಪಟ್ಟಣಗಳೆರಡರ ಶೋಕಿಯ ದೇಹವಿನ್ಯಾಸವನ್ನು ಒಂದೇ ಡಬ್ಬಿಗೆ ಹಾಕಿ ಕುಲುಕಿದಂತೆ ಕಾಣಿಸುತ್ತಿದ್ದರು.

ರಾಜಬಡಾವಣೆಯ ಒಂದು ಮನೆಯಲ್ಲಿದ್ದ ಮಾವಿನ ಮರದ ಕೆಳಗಡೆ ಇರುವ ಉಯ್ಯಾಲೆಯಲ್ಲಿ ಕುಳಿತ ಗೀತಾ ಗಂಡ ಮಕ್ಕಳನ್ನು ಕಚೇರಿಗೆ, ಶಾಲೆಗೆ ಕಳುಹಿಸಿ

